# ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಮೈಸೂರು.
## ಶಿಲ್ಪಕಲಾ ವಿಭಾಗ
## ಲೋಹದ ಹಾಳೆ (ತಗಡು) ಉಬ್ಬು ಶಿಲ್ಪಕಲೆ ಕಾರ್ಯಾಗಾರ

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಮೈಸೂರು. ಸಂಸ್ಥೆಯ ಶಿಲ್ಪಕಲಾ ವಿಭಾಗದಲ್ಲಿ 2023-2024 ರ ಶೈಕ್ಷಣಿಕ ವರ್ಷದಲ್ಲಿ ದಿನಾಂಕ: 08-11-2023 ರಿಂದ 10-11-2023 ರವರೆಗೆ ಲೋಹದ ಹಾಳೆಯ (ತಗಡು) ಉಬ್ಬು ಶಿಲ್ಪಕಲೆ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ನಾಡಿನ ಹೆಸರಾಂತ ಲೋಹ ಶಿಲ್ಪ ಕಲಾವಿದರಾದ ಶ್ರೀ ಬಿ. ಎಸ್.ರವಿಕುಮಾರ್. (ಬಿಳಿಕೆರೆ ನಗರ, ಮೈಸೂರು ಜಿಲ್ಲೆ, ಕರ್ನಾಟಕ) ರವರನ್ನು ಆಹ್ವಾನಿಸಲಾಗಿತ್ತು.

ರಾಜ ಮಹಾರಾಜರ ಕಾಲದಿಂದ ಲೋಹದ ಹಾಳೆಯ (ತಗಡು) ಉಬ್ಬು ಶಿಲ್ಪಕಲೆ ಪ್ರಸಿದ್ಧಿ ಪಡೆದ ಮಾಧ್ಯಮವಾಗಿದೆ. ಉದಾ: ಮೈಸೂರಿನ ಅರಮನೆಯ ಒಳಗೆ ಬೆಳ್ಳಿಯ ಬಾಗಿಲುಗಳ ಮೇಲೆ ಸುಂದರವಾದ ಉಬ್ಬುಶಿಲ್ಪಗಳಿವೆ. ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಸ್ಥಾನದ ಬಾಗಿಲುಗಳ ಮೇಲೆ ಇರುವ ಬೆಳ್ಳಿಯ ಉಬ್ಬು ಶಿಲ್ಪಗಳನ್ನು ಕಾಣುತ್ತೇವೆ. ಇವತ್ತಿಗೂ ಲೋಹ ಹಾಳೆಯ (ತಗಡು) ಮಾಧ್ಯಮದ ಉಬ್ಬು ಶಿಲ್ಪಕಲೆ ಚಾಲ್ತಿಯಲ್ಲಿದೆ. ಇದೋಂದು ವಿಶಿಷ್ಟ ಮಾಧ್ಯಮವಾಗಿದ್ದರಿಂದ, ನಮ್ಮ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡುವ ಉದ್ದೇಶ ಹೊಂದಿದೆ ಶಿಲ್ಪಕಲಾ ವಿಭಾಗ.

**ಲೋಹದ ಹಾಳೆ** (ತಗಡು):

ಹಿತ್ತಾಳೆ, ತಾಮ್ರ, ಬೆಳ್ಳಿ, ಬಂಗಾರ, ಅಲ್ಯೂಮಿನಿಯಂ, ಎಣ್ಣೆಯ ಡಬ್ಬ. ಈ ಎಲ್ಲ ಲೋಹದ ಹಾಳೆಗಳಿಂದ (ತಗಡು) ಉಬ್ಬು ಶಿಲ್ಪಕಲೆ ರಚಿಸುತ್ತಾರೆ. ಎಷ್ಟು ಉಬ್ಬು ಹಾಗೂ ಎಷ್ಟು ಕಡಿಮೆ ಉಬ್ಬು ರಚಿಸಬೇಕು, ಅನ್ನುವುದರ ಮೇಲೆ ಲೋಹದ ಹಾಳೆಯ ದಪ್ಪ ಹಾಗೂ ತೆಳುವು ನಿರ್ಧಾರವಾಗುತ್ತದೆ. ಹೆಚ್ಚು ಉಬ್ಬು ಮಾಡುವುದಾದರೆ ದಪ್ಪನೆಯ ಲೋಹದ ಹಾಳೆಯನ್ನು ತೆಗೆದುಕೊಳ್ಳಬೇಕು. ಕಡಿಮೆ ಉಬ್ಬು ಮಾಡುವುದಾದರೆ ತೆಳ್ಳನೆಯ ಲೋಹದ ಹಾಳೆಯನ್ನು ತೆಗೆದುಕೊಳ್ಳಬೇಕು.

ಲೋಹದ ಹಾಳೆಯ ಮೇಲೆ ರೇಖಾ ಚಿತ್ರವನ್ನು ರಚಿಸಿಕೊಂಡು, ಮೊಳೆಗಳ (ಟೋಲ್ಸ್) ಸಹಾಯದಿಂದ ತಟ್ಟುತ್ತಾ ಹೋಗಬೇಕು. ಲೋಹದ ಹಾಳೆಯನ್ನು ಬೆಂಕಿಯಿಂದ ಬಿಸಿ ಮಾಡಬೇಕು. ಇದರಿಂದ ಹಾಳೆಯು ಮೆದುವಾಗುತ್ತದೆ. ತಟ್ಟಲು ಅನುಕೂಲವಾಗುತ್ತದೆ. ಗುಂಡು ಮೊಳೆಗಳಿಂದ ರೇಖೆಯನ್ನು ರಚಿಸಿಕೊಂಡು ಮಧ್ಯದಲ್ಲಿರುವ ಸ್ಥಳದಲ್ಲಿ ತಟ್ಟಬೇಕು.

## ಲೋಹದ ಹಾಳೆಗಳ (ತಗಡು) ವಿವರಣೆ

| ಕ್ರ.ಸಂ. | ಲೋಹ | ದಪ್ಪದ ಹಾಳೆ (ತಗಡು) | ವಿವರಣೆ |
|---|---|---|---|
| 1 | ಹಿತ್ತಾಳೆ | 20ರಿಂದ 24 (ಗೇಜ್)<br><br>16 ರಿಂದ 18 (ಗೇಜ್) | ಈ ತೆಳುವಾದ ಹಾಳೆಯಲ್ಲಿ ನಾವು ಅಂದು ಕೊಂಡ ಹಾಗೆ ಉಬ್ಬು ಶಿಲ್ಪವನ್ನು ರಚಿಸಬಹುದು.<br><br>ಈ ದಪ್ಪದ ಹಾಳೆಯಲ್ಲಿ ನಾವು ಅಂದುಕೊಂಡ ಹಾಗೆ ಮಾಡುವುದು ಕಷ್ಟ. ಹಾಳೆಯು ದಪ್ಪವಿರುವ ಕಾರಣ ಆಕಾರ ರಚಿಸಲು ಶಕ್ತಿಯು ಹಚ್ಚಾಗಿ ಬೇಕಾಗುತ್ತದೆ . ಈ ಹಿನ್ನೆಲೆಯಲ್ಲಿ ಯಂತ್ರದಿಂದ ರಚಿಸುವುದು ಸೂಕ್ತವಾಗಿರುತ್ತದೆ.<br>5 ರಿಂದ 10 ವರ್ಷ ಪಾಲಿಷ್ ಇರುತ್ತದೆ. |
| 2 | ತಾಮ್ರ | 20 ರಿಂದ 30 (ಗೇಜ್)<br><br>16 ರಿಂದ 18 (ಗೇಜ್) | ಈ ತೆಳುವಾದ ಹಾಳೆಯಲ್ಲಿ ನಾವು ಅಂದು ಕೊಂಡ ಹಾಗೆ ಉಬ್ಬು ಶಿಲ್ಪವನ್ನು ರಚಿಸಬಹುದು.<br>ಈ ದಪ್ಪದ ಹಾಳೆಯಲ್ಲಿ ನಾವು ಅಂದುಕೊಂಡ ಹಾಗೆ ಮಾಡುವುದು ಕಷ್ಟ. ಹಾಳೆಯು ದಪ್ಪವಿರುವ ಕಾರಣ ಆಕಾರ ರಚಿಸಲು ಶಕ್ತಿಯು ಹಚ್ಚಾಗಿ ಬೇಕಾಗುತ್ತದೆ . ಈ ಹಿನ್ನೆಲೆಯಲ್ಲಿ ಯಂತ್ರದಿಂದ ರಚಿಸುವುದು ಸೂಕ್ತವಾಗಿರುತ್ತದೆ.<br>5 ರಿಂದ 10 ವರ್ಷ ಪಾಲಿಷ್ ಇರುತ್ತದೆ. |
| 3 | ಬೆಳ್ಳಿ | 16 ರಿಂದ 32 (ಗೇಜ್) | ಈ ತೆಳುವಾದ ಹಾಳೆಯಲ್ಲಿ ನಾವು ಅಂದು ಕೊಂಡ ಹಾಗೆ ಉಬ್ಬು ಶಿಲ್ಪವನ್ನು ರಚಿಸಬಹುದು. |
| 4 | ಬಂಗಾರ | 16 ರಿಂದ 33 (ಗೇಜ್) | ಈ ತೆಳುವಾದ ಹಾಳೆಯಲ್ಲಿ ನಾವು ಅಂದು ಕೊಂಡ ಹಾಗೆ ಉಬ್ಬು ಶಿಲ್ಪವನ್ನು ರಚಿಸಬಹುದು. |
| 5 | ಕಂಚು | 12 ರಿಂದ 20 (ಗೇಜ್) | ಕಂಚು ಮಾದ್ಯಮದಲ್ಲಿ ಉಬ್ಬುಶಿಲ್ಪ ರಚಿಸುವುದು ಕಷ್ಟ. ಯಂತ್ರದಿಂದ ಪ್ರಯತ್ನಿಸಬಹುದು, ಎರಕದಿಂದ ಮಾಡಬಹುದು ಗೇಜ್ ಜಾಸ್ತಿಬರುತ್ತದೆ. |
| 6 | ಅಲ್ಯೂಮಿನಿಯಂ | 15 ರಿಂದ 24 (ಗೇಜ್) | ಸಾಂದ್ರತೆ ಕಡಿಮೆ ಇರುತ್ತದೆ. ಹೆಚ್ಚು ಉಬ್ಬು ಮಾಡುವುದು ಆಗುವುದಿಲ್ಲಾ. |
| 7 | ಎಣ್ಣೆಯ ಡಬ್ಬ | --- | ಸಾಂದ್ರತೆ ಕಡಿಮೆ ಇರುತ್ತದೆ. ಹೆಚ್ಚು ಉಬ್ಬು ಮಾಡುವುದು ಆಗುವುದಿಲ್ಲಾ. |

**ರಾಳ ತಯಾರಿಸುವ ವಿಧಾನ: (ಚದರಸ)**

ರಾಳ ಎಂದರೆ, ಇದು ಮರದಿಂದ ಸಿಗುವಂತಹ ಒಂದು ಅಂಟು ಪದಾರ್ಥ. ಒಂದು ಬಾಣಲೆಯಲ್ಲಿ ಹಾಕಿ ಎಣ್ಣೆಯೊಂದಿಗೆ ಕರಗಿಸಬೇಕು. ಸಣ್ಣಗೆ ಕುಟ್ಟಿರುವ ಇಟ್ಟಿಗೆ ಪುಡಿ ಅಥವಾ ಜಾಜ (ಹಿರಿಮಂಜು) ಪುಡಿ ಅಥವಾ ಬಸ್ಮದ ಪುಡಿ ಮಿಶ್ರಣ ಮಾಡಿಕೊಳ್ಳುತ್ತಾರೆ.

ಹಲಗೆಯ ಮೇಲೆ ಮಿಶ್ರಣವಾದ ರಾಳದ (ಚದರಸ) ತುಂಡುಗಳನ್ನು ಜೋಡಿಸಿಕೊಂಡು ಬೆಂಕಿಯಿಂದ ಬಿಸಿಯನ್ನು ಮಾಡಬೇಕು. ಮೆದುವಾದ ಚದರಸಕ್ಕೆ (ರಾಳ) ಲೋಹದ ಹಾಳೆಯನ್ನು (ತಗಡು) ಇಟ್ಟು, ಅದರ ಮೇಲೆ ಭಾರವಾದ ವಸ್ತುವನ್ನು ಇಡಬೇಕು. ಲೋಹದ ಹಾಳೆಯು ರಾಳಕ್ಕೆ ಚೆನ್ನಾಗಿ ಅಂಟಿಕೊಳ್ಳುತ್ತದೆ. ಉಬ್ಬು ಶಿಲ್ಪ ರಚಿಸಲು ಅನಕೂಲವಾಗುತ್ತದೆ.

ಕೆಲಸ ಮಾಡುವಾಗ ಲೋಹದ ಹಾಳೆಯು ಗಟ್ಟಿ ಎನಿಸಿದಾಗ ರಾಳದಿಂದ ಬೇರ್ಪಡಿಸಿ ಲೋಹದ ಹಾಳೆಯನ್ನು ಬಿಸಿ ಮಾಡಿಕೊಳ್ಳಬೇಕಾಗುತ್ತದೆ. ಇದರಿಂದ ಉಬ್ಬು ತಗ್ಗುಗಳನ್ನು ಆಕಾರಗಳನ್ನು ರಚಿಸಲು ಸೂಕ್ತವಾಗುತ್ತದೆ.

**ಚದರಸದ ತಯಾರು ಮಾಡಿಕೊಳ್ಳುವ ವಿವರಣೆ**

| ಕ್ರ.ಸಂ | **ಸಾಮಗ್ರಿ** | **ತೂಕ** |
|---|---|---|
| 1 | ರಾಳಾ | 1 ಕೆಜಿ |
| 2 | ಬಸ್ಮ | 1 ಕೆಜಿ |
| 3 | ಕಡ್ಲೆ ಕಾಯಿ ಎಣ್ಣೆ | 300 ರಿಂದ 400 ml |

ರಾಳಾ ಜಿಗುಟು ಇದ್ದರೆ ಎಣ್ಣೆ ಜಾಸ್ತಿ ಹಾಕಬೇಕು.

**ಮೆತ್ತಗಿನ ಚದರಸ**

| ಕ್ರ.ಸಂ | **ಸಾಮಗ್ರಿ** | **ತೂಕ** |
|---|---|---|
| 1 | ಚದರಸ | ಕಡ್ಲೆ ಕಾಯಿ ಎಣ್ಣೆ 600 ML ಅವಶ್ಯಕತೆ. |
| 2 | ಗಟ್ಟಿ ರಾಳಾಗೆ | ಕಡ್ಲೆ ಕಾಯಿ ಎಣ್ಣೆ 300 ML ಅವಶ್ಯಕತೆ. |

**ಉಪಕರಣಗಳು:**

ಲೋಹ ಹಾಳೆಯ ಮೇಲೆ ರಚಿಸುವ ಮೊಳೆಗಳನ್ನು (ಟೋಲ್ಸ್) ಶಿಲ್ಪಿಯು ತನ್ನ ಅನುಭವಕ್ಕೆ ಅಣುಗುಣವಾಗಿ, ತಾನೇ ಮೊಳೆಗಳನ್ನು (ಟೋಲ್ಸ್) ಮಾಡಿಕೊಳ್ಳುತ್ತಾನೆ. ಅಥವಾ ನುರಿತ ಕುಲುಮೆಯವರ ಹತ್ತೀರ ಹೇಳಿ ಮಾಡಿಸಿಕೊಳ್ಳುತ್ತಾನೆ. ಹೆಚ್ಚಿನ ಉಪಕರಣಗಳು (ಟೋಲ್ಸ್) ಮಾರುಕಟ್ಟೆಯಲ್ಲಿ ಲಭ್ಯವಿರುವುದಿಲ್ಲಾ.

## ಮೊಳೆಗಳು (ಟೋಲ್ಸ್)

ಹಿತ್ತಾಳೆ, ತಾಮ್ರ, ಅಲ್ಯುಮಿನಿಯಂ, ಎಣ್ಣೆಯ ಡಬ್ಬ, ಲೋಹದ ಹಾಳೆಯಲ್ಲಿ ಉಬ್ಬು ಶಿಲ್ಪ ರಚಿಸಲು ಉಪಯೋಗಿಸಬಹುದಾದ ಮೊಳೆಗಳ ಹೆಸರುಗಳು. ಈ ಕೆಳಗಿನಂತಿವೆ.

(1) ಸಂಪು ಮೊಳೆ. (2) ಉಗುರು ಮೊಳೆ. (3) ಉದ್ದಿನ ಕಾಳು ಮೊಳೆ. (4) ಮಡಿಕೆ ಮೊಳೆ. (5) ರೇಖೆ ಮೊಳೆ. (6) ಚಿಕ್ಕ ಗುಬ್ಬಿ ಮೊಳೆ. (7) ಉಬ್ಬೆತ್ತುವ ಮೊಳೆ. (8) ನಕಾಶೆ ಮೊಳೆ. (9) ಜಂಟಿ ರೇಖೆ ಮೊಳೆ. (10) ಚಿಕ್ಕ ಪೆರ್ ಮೊಳೆ. (11) ಬದ್ ಮಟ್ಟನೆ ಮೊಳೆ. (12) ದೊಡ್ಡ ಪೆರ್ ಮೊಳೆ. (13) ಮಟ್ಟನೆ ಮೊಳೆ (14) ದೊಡ್ಡ ಗುಬ್ಬಿ ಮೊಳೆ. (15) ಕಂಚಿನ ಬದ್ ಮಟ್ಟನೆ ಮೊಳೆ (16) ಜೋಡಿ ಬಂದಿ ಮೊಳೆ (16) ಚಿಕ್ಕ ಕರವಾಯಿಗಳು (17) ದೊಡ್ಡ ಕರವಾಯಿಗಳು (18) ವಾಟುವಿಕೆ ಮೊಳೆ

ಹೀಗೆ ಇತರೆ ಮೊಳೆಗಳು ಇದ್ದು, ಈ ಮೊಳೆಗಳಿಗೆ (ಟೋಲ್ಸ್) ಟೆಂಪರ್ ಅವಶ್ಯಕತೆ ಇರುತ್ತದೆ. 18 ರೀತಿಯ ಮೊಳೆಗಳನ್ನು ಮೇಲೆ ತಿಳಿಸಲಾಗಿದೆ. ಪ್ರತಿ ಹೆಸರಿನ ಮೊಳೆಯಲ್ಲಿ 50 ಸಂಖ್ಯೆಯ ಗುಂಪು ಇರುತ್ತವೆ. ಒಟ್ಟು 900 ರೀತಿಯ ಮೊಳೆಗಳು ಇರುತ್ತವೆ.

ಚಿನ್ನ, ಬೆಳ್ಳಿ,. ಲೋಹದ ಹಾಳೆಯಲ್ಲಿ ಉಬ್ಬು ಶಿಲ್ಪಕಲೆ ರಚಿಸಲು ಕಂಚಿನ ಮೊಳೆಗಳನ್ನು ಉಪಯೋಗಿಸುತ್ತಿದ್ದರು. ಕಂಚಿನ ಮೊಳೆಗಳು ಟೆಂಪರ್ ಕಡಿಮೆ ಇರುವುದರಿಂದ ಚಿನ್ನ, ಬೆಳ್ಳಿ,. ಲೋಹದ ಹಾಳೆಯಲ್ಲಿ ರಚಿಸಲು ಅನಕೂಲವಾಗುತ್ತದೆ. ಈಗಲೂ ಹಿರಿಯರ ಬಿಟ್ಟು ಹೋದ ಕಂಚಿನ ಮೊಳೆಗಳನ್ನು ಉಪಯೋಗಿಸುತ್ತಿದ್ದಾರೆ. ಕಂಚಿನ ಮೊಳೆ ಮಾಡುವ ಅನುಭವವಿರುವವರು ಮಾಡಿಕೊಳ್ಳುತ್ತಾರೆ. ಇಂದು ಕಂಚಿನ ಮೊಳೆ ಮಾಡುವುದು ಕಷ್ಟ ಹಾಗೂ ದುಬಾರಿಯಾಗುತ್ತದೆ. ಇಲ್ಲದವರು ಟಂಗ್ಸ್ಟನ್ ಸ್ಟೀಲ್ ಲೋಹದಿಂದ ಮಾಡಿಕೊಂಡು ಉಪಯೋಗಿಸುತ್ತಾರೆ. ಮೇಲಿನ ಎಲ್ಲ ಮೊಳೆಗಳನ್ನು ಆಗಾಗ ಸಾಣೆ ಕಲ್ಲಿಗೆ ಉಜ್ಜಿ ಸೂಕ್ಷ್ಮ ಕೆಲಸ ಮಾಡುತ್ತಾರೆ.

### ಸುತ್ತಿಗೆಗಳು ಹಾಗೂ ಕತ್ತರಿ ಮತ್ತು ಅರಗಳು

(1) 200 ರಿಂದ 500 ಗ್ರಾಮ್ ತೂಕ 2 ಬದಿಯಲ್ಲಿಕೆಲಸ ಮಾಡುವ ಸುತ್ತಿಗೆ.
(2) 50 ರಿಂದ 200 ಗ್ರಾಮ್ ತೂಕದ ಒಂದು ಬದಿಯಲ್ಲಿ ಕೆಲಸ ಮಾಡುವ ಸುತ್ತಿಗೆ
(3) ಮರದ ಸುತ್ತಿಗೆಗಳು.
(4) ಎಮ್ಮೆ ಕೊಂಬಿನ ಸುತ್ತಿಗೆಗಳು
(5) ನೆಲ ಸುತ್ತಿಗೆ (6) ಲೋಹದ ಹಾಳೆಗಳನ್ನು ಕತ್ತರಿಸಲು ಬೇರೆ ಬೇರೆ ಅಳತೆಯ ಕತ್ತರಿಗಳು.
(7) ಚಿಕ್ಕ ಹಾಗೂ ದೊಡ್ಡ ಅರಗಳು.


ಉದ್ದಿನಕಾಳು ಮೊಳೆ


ಉಗುರು ಮೊಳೆ


ರೇಖೆ ಮೊಳೆ


ಕಂಚಿನ ಬದ್ ಮಟ್ಟನೆ ಮೊಳೆ



ವಾಟುವಿಕೆ ಮೊಳೆ


ಜೋಡಿ ಬಂದಿ ಮೊಳೆ


ಕರವಾಯಿಗಳು


ಚಿಕ್ಕ ಕರಾವಾಯಿಗಳು

## ಉಬ್ಬು ಶಿಲ್ಪ ರಚನೆಗೆ ಬಳಸುವಂತ ಉಪಕರಣಗಳು



ಬದ್ ಮಟ್ಟನೆ ಮೊಳೆ




ಗುಬ್ಬಿಮೊಳೆ



ದೊಡ್ಡ ಪೆರ್ಕ್ಯ ಮೊಳೆ



ಸಂಪು ಮೊಳೆ



ಚಿಕ್ಕ ಪೆರ್ಕ್ಯ ಮೊಳೆ



ಉದ್ದಿನ ಕಾಳು ಮೊಳೆ



ಮಟ್ಟನೆ ಮೊಳೆ



ದೊಡ್ಡ ಗುಬ್ಬಿ ಮೊಳೆ



ಚಿಕ್ಕ ಹರಗಳು



ಮೂಸೆಗಳು



ಕತ್ತರಿಗಳು



ದೊಡ್ಡ ಹರಗಳು



ಸುತ್ತಿಗೆಗಳು



ಮರದ ಸುತ್ತಿಗೆಗಳು



ಎಮ್ಮೆ ಕೊಂಬಿನ ಮರದ ಸುತ್ತಿಗೆಗಳು



ಲೋಹ ಶಿಲ್ಪ ಕಲಾವಿದರಾದ ಶ್ರೀ ಬಿ. ಎಸ್. ರವಿಕುಮಾರ್ ರವರು.













ವಿದ್ಯಾರ್ಥಿಗಳಿಗೆ ಮಾರ್ಗದರ್ಶನದ ಜೊತೆಗೆ ಪ್ರಾತ್ಯಕ್ಷಿಕೆ.

ಸ್ವತ: ವಿದ್ಯಾರ್ಥಿಗಳು  ಮೊಳೆಗಳನ್ನು (ಟೋಲ್ಸ್) ಮಾಡಿಕೊಳ್ಳುವ ಬಗೆ  ಹಾಗೂ ಟೋಲ್ಸ್ ಗೆ ಟೇಂಪರ್ ಕೊಡುವ ಬಗೆ  ಕಲಾವಿದರು ಪ್ರಾತ್ಯಕ್ಷೀಕೆ ನೀಡಿದರು.









ಕಲಾವಿದರು ಹೇಳಿ ಕೊಟ್ಟ ಹಾಗೆ ವಿದ್ಯಾರ್ಥಿಗಳು ತಾವೇ  ಮೊಳೆಗಳನ್ನು  (ಟೋಲ್ಸ್)  ಮಾಡಿಕೊಳ್ಳುತ್ತಿರುವುದು.



ಶಿಲ್ಪಕಲಾವಿದರಾದ  ಬಿ.ಎಸ್. ರವಿಕುಮಾರ್ ರವರ ಪ್ರಾತ್ಯಕ್ಷೀಕೆಯ ಕಲಾಕೃತಿ

ಶಿಲ್ಪಕಲಾವಿದರೊಂದಿಗೆ ವಿದ್ಯಾರ್ಥಿಗಳು ರಚನೆಯಲ್ಲಿ ತೊಡಗಿರುವುದು























LOS ANGELES




ಹಿತ್ತಾಳೆಯ ಲೋಹದ ಹಾಳೆಯ ಉಬ್ಬು ಶಿಲ್ಪಕಲೆಯ ನಿರ್ಮಾಣ ಹಂತದ ಕಲಾಕೃತಿಗಳು.













ಎಣ್ಣೆಯ ಡಬ್ಬದ ಹಾಳೆಯ (ತಗಡು) ಕಲಾಕೃತಿ

ಒಂದು ಬೌಲ್ ನೀರಿನಲ್ಲಿ ಸಲ್ಫರಿಕ್  ಆ್ಯಸಿಡ್ ಸ್ವಲ್ಪ ಪ್ರಮಾಣ ಮಿಶ್ರಣ ಮಾಡಿ ಕಲಾಕೃತಿಯನ್ನು ಸ್ವಚ್ಛಗೊಳಿಸುವುದು. ಹಾಗೂ ನೈಟ್ರೀಕ್ ಆ್ಯಸಿಡ್ ನಿಂದ ಕಲಾಕೃತಿಯು ಹೊಳಪಾಗಿ ಕಾಣಲು ಶಿಲ್ಪಕಲಾವಿದರು ಪ್ರಾತ್ಯಕ್ಷೀಕೆ ನೀಡಿದರು.











ಕಲಾವಿದರು ಹೇಳಿ ಕೊಟ್ಟಂತೆ ವಿದ್ಯಾರ್ಥಿಗಳು ಮುಂದುವರೆಸಿದರು.

ಕಾರ್ಯಾಗಾರದ ಕೊನೆಯ ದಿನ ಶಿಲ್ಪಕಲಾವಿದರನ್ನು ವಿಭಾಗದಿಂದ ಸನ್ಮಾಸಲಾಯಿತು.









ಶಿಲ್ಪಕಲಾ ವಿದ್ಯಾರ್ಥಿಗಳು ಹಾಗೂ ಓ. ಇ. (ಸಬ್ಸಿಡರಿ) ವಿದ್ಯಾರ್ಥಿಗಳು ಲೋಹ ಹಾಳೆ ಉಬ್ಬು ಶಿಲ್ಪಕಲೆ ಕಾರ್ಯಾಗಾರಕ್ಕೆ ಭಾಗವಹಿಸಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

## ಶಿಲ್ಪಕಲಾ ವಿಭಾಗದ ವಿದ್ಯಾರ್ಥಿಗಳ ವಿವರ

| ಕ್ರ.ಸಂ. | ವಿದ್ಯಾರ್ಥಿಯ ಹೆಸರು | ಸೇಮಿಸ್ಟರ್ | ವಿಭಾಗ |
|---|---|---|---|
| **1** | ಯಸ್ವಂತ್. ಎಸ್.ಎಸ್. | 3 | ಶಿಲ್ಪಕಲೆ |
| **2** | ಶ್ರೇಯಸ್. ಗುಡಿಗಾರ. | 3 | ಶಿಲ್ಪಕಲೆ |
| **3** | ವಿನಾಯಕ. ಭಟ್. | 3 | ಶಿಲ್ಪಕಲೆ |
| **4** | ನಚಿಕೇತನ. | 3 | ಶಿಲ್ಪಕಲೆ |
| **5** | ಹೇಮಂತ. ಜೆ. | 3 | ಶಿಲ್ಪಕಲೆ |
| **6** | ಇಲ್ಡಾ. ಕೌರಿನ್ ಮ್ಯಾಥ್ಯು. | 3 | ಶಿಲ್ಪಕಲೆ |
| | | | |
| **7** | ಮಂಜುನಾಥ. ಕೆ. | 5 | ಶಿಲ್ಪಕಲೆ |
| **8** | ಶರಣ್. ಬಿ. | 5 | ಶಿಲ್ಪಕಲೆ |
| **9** | ಮಿನಲ್. | 5 | ಶಿಲ್ಪಕಲೆ |
| **10** | ಯಶ್ವಂತ. | 5 | ಶಿಲ್ಪಕಲೆ |
| **11** | ನರೇಶ. | 5 | ಶಿಲ್ಪಕಲೆ |
| **12** | ಸುಜಯ್. ಸಿಂಹ. | 5 | ಶಿಲ್ಪಕಲೆ |
| **13** | ಮೋಹಿತ್. | 5 | ಶಿಲ್ಪಕಲೆ |
| **14** | ಸ್ನೂದ್ರುಲ್. | 5 | ಶಿಲ್ಪಕಲೆ |
| | | | |
| **15** | ವೈಭವ ಗೌಡ. | 7 | ಶಿಲ್ಪಕಲೆ |
| **16** | ವೈಭವ ನಾಗ್. | 7 | ಶಿಲ್ಪಕಲೆ |
| **17** | ಯೂವರಾಜ. | 7 | ಶಿಲ್ಪಕಲೆ |
| **18** | ಜ್ಯೋತಿಕಾ. | 7 | ಶಿಲ್ಪಕಲೆ |
| | | | |
| **19** | ಮಣಿಶ್. | MVA | ಶಿಲ್ಪಕಲೆ |
| **20** | ಸಂಜಯ್. | MVA | ಶಿಲ್ಪಕಲೆ |
| **21** | ವಿನಯ್. | MVA | ಶಿಲ್ಪಕಲೆ |

## ಶಿಲ್ಪಕಲಾ ವಿಭಾಗದ ಸಬ್ಸಿಡರಿ (ಓ.ಇ.) ವಿದ್ಯಾರ್ಥಿಗಳ ವಿವರ

| ಕ್ರ.ಸಂ | ವಿದ್ಯಾರ್ಥಿಯ ಹೆಸರು | ಸೇಮಿಸ್ಟರ್ | ವಿಭಾಗ |
|---|---|---|---|
| 1 | ರೀನಾ | 3 | ಚಿತ್ರಕಲಾ |
| 2 | ರಮೇಶ | 3 | ಚಿತ್ರಕಲಾ |
| 3 | ವಿಘ್ನೇಶ. ಎ. | 3 | ಚಿತ್ರಕಲಾ |
| 4 | ಮುರಲಿ. ಬಿ.ಎನ್. | 3 | ಚಿತ್ರಕಲಾ |
| | | | |
| 5 | ಪೂಜಾ. ಜಿ. ಭಟ್. | 5 | ಅನ್ವಯಕಲೆ |
| 6 | ಸಂಗೀತಾ. ಕೆ. | 5 | ಅನ್ವಯಕಲೆ |
| 7 | ನಿತ್ಯಶ್ರೀ | 5 | ಗ್ರಾಫಿಕ್ಸ್ |
| 8 | ಶ್ರೀಕರ್. | 5 | ಚಿತ್ರಕಲಾ |
| 9 | ಸಂಕೇತ್ | 5 | ಚಿತ್ರಕಲಾ |
| | | | |
| 10 | ಕಾವ್ಯ | 7 | ಚಿತ್ರಕಲಾ |
| 11 | ಆದರ್ಶ | 7 | ಚಿತ್ರಕಲಾ |

ಒಟ್ಟು 32 ವಿದ್ಯಾರ್ಥಿಗಳು ಕಾರ್ಯಾಗಾರಕ್ಕೆ ಭಾಗವಹಿಸಿದ್ದು,ತನ್ಮಯತೆಯಿಂದ ರಚನೆಯನ್ನು ಮಾಡಿರುತ್ತಾರೆ. 1x1 ಅಡಿಯ ಹಿತ್ತಾಳೆ ಲೋಹದ ಹಾಳೆ (ತಗಡು) ಯನ್ನು ವಿದ್ಯಾರ್ಥಿಗಳೇ ತಂದಿರುತ್ತಾರೆ. ಹಾಗೂ ಮೊಳೆಗಳನ್ನು (ಟೋಲ್ಸ್) ಅವರೇ ತಂದಿದ್ದು, ಪೂರ್ಣವಾದ ಉಬ್ಬು ಶಿಲ್ಪ ಕಲಾಕೃತಿಯನ್ನು ತಮ್ಮ ಬಳಿಯಲ್ಲಿ ಇಟ್ಟುಕೊಂಡಿರುತ್ತಾರೆ.

ವಿದ್ಯಾರ್ಥಿಗಳು ಉತ್ತಮವಾಗಿ ಸ್ಪಂದಿಸಿದ್ದು, ವಿದ್ಯಾರ್ಥಿಗಳಿಗೆ ಇನ್ನು ಹೇಳಿಕೊಡಬೇಕು ಎನ್ನುವ ಹಂಬಲ ಉಂಟಾಯಿತು. ಎಂದು ಶಿಲ್ಪಕಲಾವಿದರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಇನ್ನು ಹೆಚ್ಚಿನ ನೈಪುಣ್ಯ ಬರಲು ಹೆಚ್ಚು ಹೆಚ್ಚುಚ್ಚು ಕೆಲಸ ಮಾಡಬೇಕು.ಆಗ ಮಾತ್ರ ಕಲೆಯು ಕರಗತಮಾಡಿಕೊಳ್ಳಲು ಸಾಧ್ಯ.

ನಾಡಿನ ಹೆಸರಾಂತ ಲೋಹ ಶಿಲ್ಪಕಲಾವಿದರಾದ ಬಿ. ಎಸ್. ರವಿಕುಮಾರ ಹಾಗೂ ವಿಭಾಗದ ಮುಖ್ಯಸ್ಥರು, ವಿಭಾಗದ ಅತಿಥಿ ಉಪನ್ಯಾಸರು ಹಾಗೂ ಸ್ಟೂಡಿಯೋ ಅಸಿಸ್ಟೆಂಟ್ ರವರು ಮತ್ತು ಕಾವಾ ಸಂಸ್ಥೆಯ ಕಛೇರಿಯ ಸಹಕಾರದಿಂದ ಲೋಹ ಉಬ್ಬು ಶಿಲ್ಪಕಲಾ ಕಾರ್ಯಾಗಾರವು ಯಶಸ್ವೀಯಾಗಿ ಮುಕ್ತಾಯವಾಗಿದೆ.

